**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ಯವರ ನ್ಯಾಯಾಲಯ**
**ಟಿ.ನರಸೀಪುರ**

**ಸಿಸಿ ನಂಃ 1287–25**

**ಸಿಡಬ್ಲ್ಯೂ-1 ಪಿಡಬ್ಲ್ಯೂ-1**

ಸಾಕ್ಷಿದಾರರ ಹೆಸರು : ಸುಶೀಲಮ್ಮ
ಗಂಡನ ಹೆಸರು : ದಾಸಯ್ಯ
ವಯಸ್ಸು : 53 ವರ್ಷ
ಉದ್ಯೋಗ : ಗೃಹಿಣಿ
ವಾಸಸ್ಥಳ : ಬಿಡದಿ ಗ್ರಾಮ.

**ಸಾಕ್ಷಿಗೆ ದಿನಾಂಕಃ 26.02.2026 ರಂದು ಪ್ರಮಾಣ ಮಾಡಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಚಾ.ಸಾ. 2 ನನ್ನ ಕಾರಿನ ಡ್ರೈವರ್. ಚಾ,ಸಾ. 3 ಮತ್ತು 4 ರವರು ನಮ್ಮ ಜಮೀನಿನಲ್ಲಿ ಕೆಲಸ ಮಾಡುವವರು.

ದಿಃ 26.06.2024 ರಂದು ಸಂಜೆ 06.00 ಗಂಟೆಯ ಸಮಯದಲ್ಲಿ ನಮ್ಮ ಜಮೀನಿನ ವಿಸ್ತೀರ್ಣ 2 ಎಕರೆ 2 1/2 ಗುಂಟೆ ಜಮೀನಿನಲ್ಲಿ ಕಾಂಪೌಂಡ್ ನ್ನು ಹಾಕುತ್ತಿದ್ದಾಗ ಆರೋಪಿಗಳು ಕಾಂಪೌಂಡನ್ನು ಹಾಕಬೇಡಿ ಎಂದು ನಮ್ಮಗಳ ಜೊತೆ ಜಗಳ ತೆಗೆದಿರುತ್ತಾರೆ. ನನ್ನ ಜುಟ್ಟನ್ನು 2 ಮತ್ತು 3 ನೇ ಆರೋಪಿಗಳು ಹಿಡಿದಿರುತ್ತಾರೆ ಹಾಗೂ ನನ್ನ ಹೊಟ್ಟೆಗೆ ಮತ್ತು ಕಿವಿಗೆ ಅವರುಗಳು ಹೊಡೆದಿರುತ್ತಾರೆ. ಜಗಳವನ್ನು ಚಾ,ಸಾ. 2 ರಿಂದ 4 ರವರು ಬಿಡಿಸಿರುತ್ತಾರೆ. ನಂತರ ತಲಕಾಡಿನ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಂತರ ಆರೋಪಿಗಳ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆ.

ದಿಃ 27.06.2024 ರಂದು ಪೋಲೀಸರು ಸ್ಥಳಕ್ಕೆ ಬಂದಿದ್ದು, ಸ್ಥಳವನ್ನು ನಾನೇ ತೋರಿಸಿದ್ದು, ಮಹಜರ್ ನ್ನು ನನ್ನ ಹಾಗೂ ಚಾ,ಸಾ. 3 ಮತ್ತು 4 ರವರ ಸಮಕ್ಷಮ ಜರುಗಿಸಿರುತ್ತಾರೆ. ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಪೋಲೀಸರಿಗೆ ಮುಂದುವರಿದ ಹೇಳಿಕೆಯನ್ನು

ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು , ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು.

**(ಮಾನ್ಯ ಎಪಿಪಿ ರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ</u>**

ಆರೋಪಿಗಳು ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ .

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ದೂರನ್ನು ನನ್ನ ಹೇಳಿಕೆಯ ಮೇರೆಗೆ ಬರೆದಿರುತ್ತಾರೆ. ದೂರಿನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುತ್ತದೆ. ನಮಗೂ ಮತ್ತು ಆರೋಪಿಗಳ ನಡುವೆ ಸಿವಿಲ್ ವ್ಯಾಜ್ಯ ಇರುತ್ತದೆ ಎಂದರೆ ಸರಿ . ನಮಗೂ ಮತ್ತು ಆರೋಪಿಗಳ ನಡುವೆ ಗಲಾಟೆ ಆಗದೇ ಇದ್ದರು ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳ ತಿರುಗಾಡುವ ದಾರಿಗೆ ತೊಂದರೆ ಮಾಡುವ ಉದ್ದೇಶದಿಂದ ಈ ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮಹಜರ್ ಸಮಯದಲ್ಲಿ ನಾನು ಸ್ಥಳದಲ್ಲಿ ಹಾಜರಿರಲಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮವನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೋಲೀಸ್ ಠಾಣೆಯಲ್ಲಿ ನಾನು ನಿಪಿ 2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಹೊಡೆದಿರುವುದಿಲ್ಲ ಹಾಗೂ ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ಟಿ.ನರಸೀಪುರ**